ಈ) ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲಿದ್ದು, ಅದರಂತೆ ದುರಸ್ತಿ ಕಾರ್ಯ ಕೈಗೊಳ್ಳಲಾಗುವುದು

859(1157) ಶ್ರೀ ಚಂದ್ರಶೇಖರ್ ಪಾಟೀಲ್ ರೇವೂರ (ಗುಲ್ಬರ್ಗಾ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಮಹಾನಗರದ ವರ್ತುಲ ರಸ್ತೆಯನ್ನು ಎಷ್ಟು ಕಿ ಮೀ ನಿರ್ಮಿಸಲಾಗಿದೆ, ಇದರ ಅಂದಾಜು ಮೊತ್ತ ಎಷ್ಟು,

ಆ) ವರ್ತುಲ ರಸ್ತೆಯನ್ನು ನಿರ್ಮಿಸಲು ಎಷ್ಟು ಎಕರೆ ಜಮೀನು ಸ್ವಾಧೀನ ಪಡಿಸಿಕೊಳ್ಳಲಾಗಿದೆ ಹಾಗೂ ಜಮೀನು ಸ್ವಾಧೀನಪಡಿಸಿಕೊಂಡ ರೈತರಿಗೆ ಪರಿಹಾರ ಧನ ನೀಡಲಾಗಿದೆಯೇ,

ಇ) ಹಾಗಿದ್ದಲ್ಲಿ ನೀಡಲಾಗಿರುವ ಪರಿಹಾರ ಧನ ಎಷ್ಟು (ಎಕರೆವಾರು ಪರಿಹಾರದ ವಿವರ ನೀಡುವುದು),

ಈ) ವರ್ತುಲ ರಸ್ತೆಯ 2 ಬದಿಗಳಲ್ಲಿ ಸರ್ವೀಸ್ ರಸ್ತೆಗಳನ್ನು ನಿರ್ಮಾಣ ಮಾಡಲಾಗಿದೆಯೇ ಹಾಗೂ ಮಾಡದಿದ್ದರೆ ಎಷ್ಟು ಕಿಮೀ ವರೆಗೆ ಮಾಡಲಾಗಿದೆ,

ಉ) ಈ ಸರ್ವೀಸ್ ರಸ್ತೆಯನ್ನು ಖಾಸಗಿಯವರು ಆಕ್ರಮಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯ,

ಊ) ಹಾಗಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ,

ಋ) ವರ್ತುಲ ರಸ್ತೆ ಹಾಗೂ ಸರ್ವೀಸ್ ರಸ್ತೆಗಳ ಕಾಮಗಾರಿಗಳನ್ನು ಯಾವ ಗುತ್ತಿಗೆದಾರರಿಗೆ ವಹಿಸಲಾಗಿದೆ,

ಎ) ಇದಕ್ಕೆ ಅನುಸರಿಸಿದ ಮಾನದಂಡಗಳೇನು,

ಏ) ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸಿದ ಸಮಯವೆಷ್ಟು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)

ಅ) ಗುಲ್ಬರ್ಗಾ ಮಹಾನಗರದ ವರ್ತುಲ ರಸ್ತೆಯನ್ನು 15 50 ಕಿಮೀ ಉದ್ದಕ್ಕೆ ನಿರ್ಮಿಸಲಾಗಿದೆ ಮತ್ತು ಇದರ ಅಂದಾಜು ವೆಚ್ಚ ರೂ 20 27 ಕೋಟಿಗಳು

ಆ) ಇಲ್ಲಿಯವರೆಗೆ 15 50 ಕಿಮೀ ರಸ್ತೆಯ ನಿರ್ಮಾಣಕ್ಕಾಗಿ ಯಾವುದೇ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ ಆದರೆ ಇನ್ನುಳಿದ 8 00

ಕಿಮೀ ರಸ್ತೆಯ ನಿರ್ಮಾಣಕ್ಕೆ ಸುಮಾರು 42 ಎಕರೆ 25 ಗುಂಟೆ ಭೂಮಿಯನ್ನು ಸ್ವಾಧೀನ ಮಾಡಲು ಯೋಜಿಸಿದ್ದು, ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಗೊಂಡಿದೆ

ಇ) ಇಲ್ಲಿಯವರೆಗೆ 15 50 ಕಿಮೀ ನಿರ್ಮಾಣಕ್ಕಾಗಿ ಭೂಸ್ವಾಧೀನಕ್ಕಾಗಿ ಯಾವುದೇ ಪರಿಹಾರ ನೀಡಿರುವುದಿಲ್ಲ ಆದರೆ ಮುಂದಿನ ಕಾಮಗಾರಿಗಳಿಗೆ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿರುವುದರಿಂದ ಈ ಭೂಸ್ವಾಧೀನಕ್ಕಾಗಿ ರೂ 2 26 ಕೋಟಿಗಳನ್ನು ಭೂಸ್ವಾಧೀನ ಅಧಿಕಾರಿಗಳು ಗುಲ್ಬರ್ಗಾ ಇವರಿಗೆ ಸಂದಾಯ ಮಾಡಲಾಗಿರುತ್ತದೆ

ಈ) ಈಗಾಗಲೇ ನಿರ್ಮಿಸಿರುವ 15 50 ಕಿಮೀ ವರ್ತುಲ ರಸ್ತೆಯ ಎರಡು ಬದಿಗೂ ಸರ್ವೀಸ್ ರಸ್ತೆಯ ಫಾರ್ಮೇಶನ್ ಮಾತ್ರ ಆಗಿದ್ದು, ರಸ್ತೆಯನ್ನು ಇನ್ನೂ ನಿರ್ಮಾಣ ಮಾಡಬೇಕಾಗಿರುತ್ತದೆ

ಉ) ಈ ರಸ್ತೆಯನ್ನು ಖಾಸಗಿಯವರು ಆಕ್ರಮಿಸಿಕೊಂಡಿರುವುದಿಲ್ಲ

ಊ) ಕ್ರಮ ಜರುಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ

ಋ) ಜೇವರ್ಗಿ ರಸ್ತೆ ಜಂಕ್ಷನ್‌ನಿಂದ ಅಳಂದ ರಸ್ತೆ ಜಂಕ್ಷನ್‌ವರೆಗಿನ 8 0 ಕಿಮೀ ರಸ್ತೆಯ ವರ್ತುಲ ರಸ್ತೆ ನಿರ್ಮಾಣ ಮತ್ತು ಒಟ್ಟು 23 00 ಕಿಮೀ ಉದ್ದದ ವರ್ತುಲ ರಸ್ತೆಯ ಎರಡೂ ಬದಿಗೂ ಸರ್ವೀಸ್ ರಸ್ತೆಯ ನಿರ್ಮಾಣವನ್ನು ತೆಗೆದುಕೊಳ್ಳಲು ಯೋಜಿಸಿದ್ದು, ಈಗ 8 00 ಕಿಮೀ ವರ್ತುಲ ರಸ್ತೆಯ ನಿರ್ಮಾಣಕ್ಕೆ ಟೆಂಡರ್ ಕರೆಯಲಾಗಿದೆ ಮತ್ತು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ

ಎ) ಕರ್ನಾಟಕ ಪಾರದರ್ಶಕ ಕಾಯ್ದೆ 2000ರ ಅನುಗುಣವಾಗಿ ಗುತ್ತಿಗೆಯ ಮಾನದಂಡವನ್ನು ವಿಧಿಸಿದೆ

ಏ) ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿಗದಿಪಡಿಸಿರುವ ಸಮಯ 18 ತಿಂಗಳುಗಳು

861(396) ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರಾಜೀವ್ ಗಾಂಧಿ ವಿದ್ಯುದೀಕರಣ ಯೋಜನೆ ಎಷ್ಟು ಜಿಲ್ಲೆಗಳಿಗೆ ಮಂಜೂರಾಗಿದೆ,